1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 72/2019

**ಸಾಕ್ಷಿಯನ್ನು ದಿಃ 13.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಎ.ಸಿ. ಪೂವಯ್ಯ | ಸಿಡಬ್ಲ್ಯೂಃ 15 | ಪಿಡಬ್ಲ್ಯೂಃ 11 |
| ತಂದೆಯ ಹೆಸರು | ಲೇಟ್ ಕೆ.ಜಿ ಚಂಗಪ್ಪ | | |
| ವಯಸ್ಸು | 51 ವರ್ಷ | | |
| ಕೆಲಸ | ಡಿ.ವೈಎಸ್.ಪಿ ಲೋಕಾಯಕ್ತ<br>ಬೆಂಗಳೂರು ಸಿಟಿ | | |
| ವಾಸಸ್ಥಳ | ಬೆಂಗಳೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ಅಕ್ಟೋಬರ್ 2017 ರಿಂದ ಮಾರ್ಚ್ 2021 ವರೆಗೆ ನಾನು ಹುಣಸೂರು ವೃತ್ತದಲ್ಲಿ ಸಿ.ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04.06.2018 ರಂದು ಚಾಸಾ 14 ರವರಿಂದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ದಿಃ 24.07.2018 ರಂದು ಚಾಸಾ 10 ಮತ್ತು 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ನಂತರ ತನಿಖೆಯೂ ಪೂರ್ಣಗೊಂಡಿದ್ದು, ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲು ಃ 3 ನೇ ಆರೋಪಿ ಪರ ಶ್ರೀ ಎಸ್.ಎನ್. ವಕೀಲರಿಂದ ಃ**

ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಯಾವುದೆ ವಿಳಂಬ ಆಗಿಲ್ಲ. ಹಾಗೆ ಅಂತಿಮ ವರದಿ ಸಲ್ಲಿಸಲು ವಿಳಂಬ ಆಗಿರುತ್ತದೆ ಎಂದರೆ ಸರಿಯಲ್ಲ. ಚಿನ್ನಾಭರಣ ಕಳ್ಳತನ ಆಗಿದೆ ಎಂದು ಈ ಕೇಸ್ ನಲ್ಲಿ ಹೇಳಿದ್ದು, ಚಿನ್ನಾಭರಣ ಖರೀದಿ ಮಾಡಿದ ರಶೀದಿಯನ್ನು ಪಿರ್ಯಾದುದಾರಿಂದ ನಾನು ಪಡೆದುಕೊಂಡಿಲ್ಲ. ಸೀಜ್ ಮಾಡಿಕೊಂಡಂತಹ ಎಲ್ಲಾ ಸ್ವತ್ತುಗಳನ್ನು ಎಲ್ಲಾ ಪ್ರಕರಣಕ್ಕೆ ಸುಳ್ಳಾಗಿ ಅಳವಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಮತ್ತು ಅಮಾನತ್ತು ಮಹಜರ್ ಅನ್ನು ಠಾಣೆಯಲ್ಲಿ ತಯಾರಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಈ ಪ್ರಕರಣದಲ್ಲೂ ಅಳವಡಿಸಿಕೊಂಡು ಆರೋಪಿತನ ಮೇಲೆ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೆ ಕಳ್ಳತನದಲ್ಲಿ ಭಾಗಿಯಾಗಿಲ್ಲ, ಅವರಿಂದ ಯಾವುದೆ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಅವುಗಳನ್ನು ಠಾಣೆಯಲ್ಲಿಯೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ವಿ.ಕೆ.ಆರ್ ವಕೀಲರಿಂದಃ**

ಶ್ರೀ ವಿ.ಕೆ.ಆರ್ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು